# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 12.05.2017 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

ಮಾನ್ಯ ಕುಲಪತಿಯವರು, ಕಾಲೇಜು ಶಿಕ್ಷಣ ಇಲಾಖೆಯ ಮಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ನೂತನ ಜಂಟಿ ನಿರ್ದೇಶಕರಾಗಿ ನಿಯುಕ್ತಿಗೊಂಡಿರುವ ಪ್ರೊ. ಉದಯಶಂಕರ್ ಹೆಚ್., ಪ್ರಾಂಶುಪಾಲರು ಗ್ರೇಡ್–I, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳಂದೂರು ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

## I ನಡಾವಳಿಗಳ ದೃಢೀಕರಣ

ದಿನಾಂಕ 22.03.2017ರಂದು ನಡೆದ 2017ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

## II ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 25.01.2017ರಂದು ನಡೆದ 2017ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.
2. ದಿನಾಂಕ 10.02.2017ರಂದು ನಡೆದ 2017ನೇ ಸಾಲಿನ ಪ್ರಥಮ ವಿಶೇಷ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.
3. ದಿನಾಂಕ 02.03.2017ರಂದು ನಡೆದ 2017ನೇ ಸಾಲಿನ ದ್ವಿತೀಯ ವಿಶೇಷ (ಘಟಿಕೋತ್ಸವ) ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**ಸಿಂಡಿಕೇಟು ಸಭೆಯು ತನ್ನ ಹಿಂದಿನ ಸಭೆಯಲ್ಲಿ ನಡೆಸಲಾದ ಚರ್ಚೆಯನ್ನು ಮುಂದುವರಿಸಿತು**

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.3:35(2017)

**ವಿಷಯ :** KSHEC ಯ K-SURF ಯೋಜನೆಯ ICARE ಮೂಲಕ ನಡೆಸಿದ ಮೌಲ್ಯಮಾಪನದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದೊರೆತ ರೇಟಿಂಗ್ ಕುರಿತು.

**ನಿರ್ಣಯ:** ಕಾರ್ಯಸೂಚಿಯಲ್ಲಿ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 03.05.2017ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿದಂತೆ, ಹಿಂದಿನ ನೋಡಲ್ ಅಧಿಕಾರಿಯಾಗಿದ್ದ ಪ್ರೊ.ಪಿ.ಎಸ್.ಯಡಪಡಿತ್ತಾಯ ಇವರಿಗೆ ಜ್ಞಾಪನ ಪತ್ರ ನೀಡಿ ಸೂಕ್ತ ವಿವರಣೆಯನ್ನು ಕೇಳಲಾಗಿತ್ತು. ಪ್ರೊ. ಯಡಪಡಿತ್ತಾಯರು ದಿನಾಂಕ ಮೇ. 9ರಂದು ಜ್ಞಾಪನಕ್ಕೆ ಉತ್ತರಿಸಿದ್ದು, ಸಿಂಡಿಕೇಟ್ ಸಭೆಯು ಪತ್ರವನ್ನು ಸುದೀರ್ಘವಾಗಿ ಚರ್ಚಿಸಿತು. ಅದರಲ್ಲಿ, ತಾವು ನೋಡಲ್ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ತಮಗೆ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಅದನ್ನು ಹಾಗೂ 'ಡಾಟಾ ಸೆಂಟರ್'ನ ಸ್ಥಾಪನೆಯ ಅಗತ್ಯತೆಯನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದಿದ್ದೇನೆಂದು ತಿಳಿಸಿರುತ್ತಾರೆ. ಅದೇ ವಿವರಣೆಯಲ್ಲಿ,

“ಬೆಂಗಳೂರಿನ KSHEC (ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಲಿ) ಕಛೇರಿಯಲ್ಲಿ ನಡೆದ ಸಭೆಯಲ್ಲಿ, K-SURFನ್ನು KSHEC ಮತ್ತು I-CARE ಸಂಸ್ಥೆಗಳು ಪ್ರಾಯೋಗಿಕ ನೆಲೆಯಲ್ಲಿ ಆರಂಭಿಸಿದೆ” ಎಂದು ತಿಳಿಸಲಾಗಿದ್ದು, ಅದಕ್ಕಾಗಿ ಮಾಹಿತಿ ಸಂಗ್ರಹದ ನಮೂನೆ ಹಾಗೂ ಅದು ಒಳಗೊಳ್ಳಬೇಕಾದ ಮಾಹಿತಿಗಳ ಕುರಿತು ಸಂಬಂಧಪಟ್ಟ ಏಜೆನ್ಸಿಗೆ ಗೊಂದಲಗಳಿದ್ದು, ದೊರೆಯುವ ಮಾಹಿತಿಯನ್ನು ಎಷ್ಟು ಶೀಘ್ರವಾಗಿ ‘ಅಪ್‌ಲೋಡ್’ ಮಾಡಲು ಸಾಧ್ಯವೊ ಅಷ್ಟು ಬೇಗ ಮಾಡಲು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಿಳಿಸಲಾಗಿತ್ತು; ಅವಶ್ಯವಿದ್ದಲ್ಲಿ ಆ ಕುರಿತ I-CARE ನಿಂದ ಸ್ಪಷ್ಟನೆಯನ್ನು ಕೇಳಲು ಕೂಡ ತಿಳಿಸಲಾಗಿತ್ತು” ಎಂದು ಬರೆದಿರುತ್ತಾರೆ. ಇವುಗಳ ಕುರಿತು ತಾನು ಕುಲಸಚಿವರು ಹಾಗೂ ವಿಶೇಷಾಧಿಕಾರಿಗಳೊಂದಿಗೆ ಚರ್ಚಿಸಿದ್ದು, ಆಡಳಿತಾತ್ಮಕ ಬೆಂಬಲವನ್ನು ಕೇಳಿರುತ್ತೇನೆ; ಕುಲಸಚಿವರು, ಪ್ರಥಮ ದರ್ಜೆ ಸಹಾಯಕ ಸಂತೋಷ್‌ರನ್ನು ಈ ಕಾರ್ಯಕ್ಕೆ ಬಳಸಿಕೊಳ್ಳಲು ಹಾಗೂ PMEBನ ಕಂಪ್ಯೂಟರ್ ಆಪರೇಟರ್‌ನ ನೆರವು ಪಡೆದುಕೊಳ್ಳಲು ಆಗ ಸೂಚಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿ ಬಾರಿಯು ‘ಡಾಟಾ’ವನ್ನು ಆನ್‌ಲೈನ್ ನಮೂನೆಯಲ್ಲಿ ಅಪ್‌ಲೋಡ್ ಮಾಡಿದ ನಂತರ, ಅದರ ಮುದ್ರಿತ ನಕಲನ್ನು ತೆಗೆದು ತನ್ನ ಹಾಗೂ ಕುಲಸಚಿವರ ಸಹಿಯೊಂದಿಗೆ ಕಳುಹಿಸಲಾಗಿದೆ ಎಂದು ತಿಳಿಸಿರುತ್ತಾರೆ. ಅಲ್ಲದೆ, ‘ಡಾಟಾಕೇಂದ್ರದ’ದ ಕೊರತೆ, ಮಾಹಿತಿ ನಮೂನೆ ಹಾಗೂ ಮಾಹಿತಿ ಕುರಿತು ಆರಂಭದಲ್ಲಿದ್ದ ಗೊಂದಲ, ಮಾಹಿತಿ ಕಲೆ ಹಾಕಲು ಹಾಗೂ ಮಾಹಿತಿ ಪರಿಷ್ಕರಿಸಲು ಸಾಕಷ್ಟು ಸಮಯ ದೊರೆಯದಿದ್ದುದು, ಮೇಲುಸ್ತುವರಿಗೆ ಸಮಿತಿ ಇಲ್ಲದಿದ್ದುದ್ದು, ಸಿಬ್ಬಂದಿ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ, ಇವುಗಳು ತನ್ನ ಕೆಲಸಕ್ಕೆ ಸಮಸ್ಯೆಯುಂಟು ಮಾಡಿರುವುವು ಎಂದು ತಿಳಿಸಿರುತ್ತಾರೆ. ಈ ಕಾರಣಗಳಿಂದಾಗಿ, ತನ್ನಿಂದ ಉದ್ದೇಶಪೂರ್ವಕವಲ್ಲದ ತಪ್ಪುಗಳು ನಡೆದಿದ್ದಲ್ಲಿ ಸಭೆಯು ಅದನ್ನು ಮನ್ನಿಸಬೇಕೆಂದು ಕೂಡ ಕೋರಿಕೊಂಡಿರುತ್ತಾರೆ. ಸದರಿ ನೋಡಲ್ ಅಧಿಕಾರಿಯವರ ವಿವರಣೆಯನ್ನು ಪರಿಶೀಲಿಸಿದ ನಂತರ ಸಭೆಯು ಈ ಕುರಿತು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಿತು. ತಮ್ಮ ಕಛೇರಿಯಿಂದ ನೋಡಲ್ ಅಧಿಕಾರಿಯವರಿಗೆ ಬೇಕಾದ ಸಿಬ್ಬಂದಿಗಳನ್ನು ಒದಗಿಸಿದ್ದನ್ನು, PMEB ಕಛೇರಿಯನ್ನು ಹಾಗೂ ಅದರ ಸಿಬ್ಬಂದಿಯನ್ನು ಕೂಡ ಒದಗಿಸಿದ್ದನ್ನು, ಸಾರ್ವತ್ರಿಕ ವಿಭಾಗದಿಂದಲೇ ವಿವಿಧ ವಿಭಾಗಗಳಿಗೆ ಪತ್ರ ಬರೆದು ಮಾಹಿತಿ ಕಲೆಹಾಕುವ ಜವಾಬ್ದಾರಿಯನ್ನು ನಿಭಾಯಿಸಿದ್ದನ್ನು, ಹೇಳಿದರಲ್ಲದೆ, ಇದರಿಂದಾಗಿ ನೋಡಲ್ ಅಧಿಕಾರಿಯವರ ಹೊರೆಯು ಬಹಳಷ್ಟು ಕಡಿಮೆಯಾದದ್ದನ್ನು ತಿಳಿಸಿದರು; ಅಲ್ಲದೆ ಸಾರ್ವತ್ರಿಕ ವಿಭಾಗವು ಕಲೆ ಹಾಕಿದ ಮಾಹಿತಿಯನ್ನು ಕ್ರೋಡೀಕರಿಸಿ ಅದನ್ನು ನೋಡಲ್ ಅಧಿಕಾರಿಯವರ ಪರಿಶೀಲನೆಗೆ ಕಳುಹಿಸಿರುವುದನ್ನು ಅವರು ಸಭೆಯ ಗಮನಕ್ಕೆ ತಂದರು. ನೋಡಲ್ ಅಧಿಕಾರಿ ಅವರ ನೇಮಕಾತಿಯ ದಿನಾಂಕದಿಂದ ಅಂತಿಮವಾಗಿ ಮಾಹಿತಿಯನ್ನು ‘ಅಪ್‌ಲೋಡ್’ ಮಾಡುವವರೆಗೆ ನೋಡಲ್ ಅಧಿಕಾರಿಗೆ ದೊರಕಿದ ಕಾಲಾವಧಿಯ ಕುರಿತು ಸಭೆಯು ಮಾಹಿತಿ ಬಯಸಿದಾಗ, I-CAREದಿಂದ ಪತ್ರವು 2016 ಮಾರ್ಚ್‌ನಲ್ಲಿ ಬಂದಿದ್ದು, ನೋಡಲ್ ಅಧಿಕಾರಿಯ ನೇಮಕಾತಿಯು ಏಪ್ರಿಲ್ ತಿಂಗಳಲ್ಲಿ ನಡೆದಿದ್ದು, 2016ರ ನವೆಂಬರ್ ತಿಂಗಳ ಮಧ್ಯಭಾಗದಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡಲಾಯಿತು. ಅಲ್ಲದೆ, ಈ ಸಂಬಂಧವಾಗಿ ನೋಡಲ್ ಅಧಿಕಾರಿಯವರಿಗೆ ವಿಶೇಷ ತರಬೇತಿಯನ್ನು ಸಹ I-CARE ಸಂಸ್ಥೆಯಿಂದ ನೀಡಲಾಗಿತ್ತು ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ವಿವರಣೆಯನ್ನು ಪರಾಮರ್ಶೆ ಮಾಡಿದ ಸಭೆಯು ಸದರಿ ನೋಡಲ್ ಅಧಿಕಾರಿಯವರು ನೀಡಿದ ವಿವರಣೆಯು ಸಂಪೂರ್ಣವಾಗಿ ಅತೃಪ್ತಿಕರವಾಗಿದ್ದು, ಸ್ವೀಕರಾರ್ಹವಾಗಿಲ್ಲವೆಂದು ಅಭಿಪ್ರಾಯಪಟ್ಟಿತು. ‘ಸಂಬಂಧಪಟ್ಟ ಅಧಿಕಾರಿಯು ಕುಂಟುನೆಪಗಳನ್ನು (lame excuses) ನೀಡುತ್ತಾ ಜವಾಬ್ದಾರಿಯಿಂದ ನುಣುಚಿಕೊಳ್ಳಲು (passing the buck) ಪ್ರಯತ್ನಿಸುತ್ತಿದ್ದಾರೆ; ಹಲವಾರು ವರ್ಷಗಳ ಕಾಲ ಆಡಳಿತದ ವಿವಿಧಾಂಗಗಳಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿಯೊಬ್ಬರು ಹಲವಾರು ಅರ್ಥಹೀನ, ಸಮರ್ಥನೀಯವಲ್ಲದ ಕಾರಣಗಳನ್ನು ನೀಡಿ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಸುತ್ತಿದ್ದಾರೆ; ಈಗಾಗಲೇ ವಿಶ್ವವಿದ್ಯಾನಿಲಯದ ಪ್ರತಿಷ್ಠೆಗೆ ಸಾಕಷ್ಟು ಧಕ್ಕೆಯಾಗಿದೆ; ಈ ರೀತಿಯ ಘಟನೆಗಳು ಇನ್ನು ಮುಂದೆ ಮರುಕಳಿಸಬಾರದು; ಹಾಗೆ ಆಗಬೇಕಾದರೆ, ಸಭೆಯು ಶಿಸ್ತುಕ್ರಮವನ್ನು ಶಿಫಾರಸು ಮಾಡಬೇಕಾಗುತ್ತದೆ; ಇಲ್ಲದಿದ್ದರೆ, ಜವಾಬ್ದಾರಿಯನ್ನು ವಹಿಸಿಕೊಂಡವರು ಮುಂದೆಯೂ ಕೂಡ ಯಾವುದೇ ಬದ್ಧತೆ, ಆಸಕ್ತಿ, ಗಂಭೀರತೆಯನ್ನು ಪ್ರದರ್ಶಿಸದೆ ವಿಶ್ವವಿದ್ಯಾನಿಲಯಕ್ಕೆ ಅಪಕೀರ್ತಿಯನ್ನು ಉಂಟುಮಾಡುತ್ತಾರೆ; ಸಿಂಡಿಕೇಟ್ ಸಭೆಗೂ ಜವಾಬ್ದಾರಿಯಿದ್ದು, ವಿಶ್ವವಿದ್ಯಾನಿಲಯದ ಘನತೆಯನ್ನು ಕಾಪಾಡುವುದು ಮುಖ್ಯವಾಗಿರುತ್ತದೆ; ಹೀಗಾಗಿ ಇಂದು ವಿಶ್ವವಿದ್ಯಾನಿಲಯಕ್ಕೆ ಉಂಟಾಗಿರುವ ಹಿನ್ನಡೆಗೆ

ಸಂಬಂಧಪಟ್ಟವರನ್ನು ಜವಾಬ್ದಾರರನ್ನಾಗಿ ಮಾಡಲೇಬೇಕಾಗುತ್ತದೆ' ಎಂದು ಸಭೆಯು ನಿರ್ಣಯಿಸಿತು. 'ಒಂದು ವೇಳೆ ಸೌಕರ್ಯಗಳ ಕೊರತೆಯಿಂದ ಅವರಿಗೆ ಕಾರ್ಯನಿರ್ವಹಿಸಲು ಕಷ್ಟವಾಗಿದ್ದರೆ, ಜವಾಬ್ದಾರಿಯನ್ನು ಬಿಟ್ಟು ಬಿಡಬಹುದಾಗಿತ್ತು; ಆದರೆ ಹುದ್ದೆಯನ್ನು ಧರಿಸಿಕೊಂಡು ಕಾರ್ಯನಿರ್ವಹಿಸದೆ ಸಬೂಬು ಹೇಳುವುದು ಸರಿಯಲ್ಲ; ಇವರಿಗೆ ಸಾಕಷ್ಟು ಸಿಬ್ಬಂದಿಯನ್ನು ಒದಗಿಸಲಾಗಿದೆ; ಅವರು ಕೆಲಸವನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ; ಇಲ್ಲಿ ಸೂಕ್ತ ಮೇಲ್ವಿಚಾರಣೆಯ ಕೊರತೆ ಎದ್ದು ಕಾಣುತ್ತಿದೆ' ಎಂದು ಪ್ರತಿಕ್ರಿಯಿಸಿತು. 'ಸದರಿ ಅಧಿಕಾರಿಯು IQAC ನೋಡಲ್ ಅಧಿಕಾರಿಯಾಗಿ ಬಹಳಷ್ಟು ಸಮಯದಿಂದ ಕಾರ್ಯನಿರ್ವಹಿಸುತ್ತಿದ್ದರೆ; ರ್‍ಯಾಂಕಿಂಗ್ ನೋಡಲ್ ಅಧಿಕಾರಿಯಾಗಿ ಎಪ್ರಿಲ್‌ನಲ್ಲಿ ನೇಮಕಾತಿ ನಡೆದಿದ್ದು ಅವರಿಗೆ ಬೇಕಾದ ಸಿಬ್ಬಂದಿ ನೆರವನ್ನು, ಕೊಠಡಿಯನ್ನು ವಿಶ್ವವಿದ್ಯಾನಿಲಯ ಒದಗಿಸಿರುತ್ತದೆ. ಸಾರ್ವತ್ರಿಕ ವಿಭಾಗದಿಂದಲೇ ಎಲ್ಲಾ ಕೋರ್ಸ್‌ಗಳ/ವಿಭಾಗಗಳಿಗೆ ಮಾಹಿತಿ ಸಲ್ಲಿಕೆಗಾಗಿ ಪತ್ರಗಳು ಕಳಿಹಿಸಲ್ಪಟ್ಟಿವೆ; ಬಂದ ಮಾಹಿತಿಯನ್ನು ಸಾರ್ವತ್ರಿಕ ವಿಭಾಗವೇ ಕ್ರೋಡೀಕರಿಸಿ ಪರಿಶೀಲನೆಗಾಗಿ ಹಾಗೂ 'ಅಪ್‌ಲೋಡ್'ಗಾಗಿ ನೋಡಲ್ ಅಧಿಕಾರಿಯವರಿಗೆ ಕಳುಹಿಸಿ ಕೊಟ್ಟಿದೆ. ಅದನ್ನು ಸೂಕ್ತವಾಗಿ ಪರಿಶೀಲಿಸಿ, ಯಾವುದಾದರು ಶೀರ್ಷಿಕೆಯಡಿ ಮಾಹಿತಿ ಕಡಿಮೆಯಿದ್ದಿದ್ದರೆ ಅದಕ್ಕೆ ಲಭ್ಯವಿರುವ ಹೆಚ್ಚಿನ ಮಾಹಿತಿಯನ್ನು ಕಲೆಹಾಕಿ ಕಳುಹಿಸಬೇಕಿತ್ತು ಮತ್ತು ಪುನರ್ ಪರಿಶೀಲನೆಯ ಅಗತ್ಯವಿತ್ತು' ಎಂದು ಸಭೆಯು ಅಭಿಪ್ರಾಯ ಪಟ್ಟಿತು. ಪತ್ರಿಕೆಗಳಲ್ಲಿ ರ್‍ಯಾಂಕಿಂಗ್ ಪ್ರಕಟಣೆಗೊಂಡ ನಂತರ ಕೂಡ ಅಧಿಕಾರಿಯವರು ಕುಲಪತಿಗಳಿಗೆ ಈ ಕುರಿತು ಸಮಗ್ರ ವರದಿಯನ್ನು ನೀಡದೆ ನಿವ್ಯ ನಿರ್ಲಕ್ಷ್ಯವನ್ನು ತೋರಿ ಕರ್ತವ್ಯ ಲೋಪವನ್ನು ಎಸಗಿದ್ದಾರೆ ಎಂದು ತೀರ್ಮಾನಿಸಿದರು. ಸಿಂಡಿಕೇಟಿನ ಎಲ್ಲಾ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದರು. ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆಯು, "ರ್‍ಯಾಂಕಿಂಗ್ ಕುರಿತು ನೋಡಲ್ ಅಧಿಕಾರಿಯಾಗಿದ್ದ ಪ್ರೊ. ಎಸ್. ಯಡಪಡಿತ್ತಾಯ ಅವರಿಗೆ ನೀಡಲ್ಪಟ್ಟ ಕಾರಣ ಕೇಳಿ ನೋಟಿಸ್ (ಜ್ಞಾಪನ)ಗೆ ಅವರು ನೀಡಿದ ವಿವರಣೆಯು ತೃಪ್ತಿಕರವಾಗಿಲ್ಲ; ಅವರ ವರ್ತನೆಯು ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯಕ್ಕೆ ಸಮನಾಗಿದೆ (his behaviour amounts to dereliction of duty and negligence); ಆದ್ದರಿಂದ, ಅವರಿಗೆ ಇನ್ನು ಮುಂದೆ ವಿಶ್ವವಿದ್ಯಾನಿಲಯ ಯಾವುದೇ ಆಡಳಿತಾತ್ಮಕ ಜವಾಬ್ದಾರಿಯನ್ನು ನೀಡಬಾರದು (hereafter no administrative responsibility shall be entrusted to him by the University)" ಎಂದು ಒಮ್ಮತದಿಂದ ನಿರ್ಣಯಿಸಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.3:1(2017)

**ವಿಷಯ :** ಅಕ್ಟೋಬರ್/ನವೆಂಬರ್ 2016ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವಿಸಲಾದ ದಂಡನೆಯನ್ನು ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.3:2(2017)

**ವಿಷಯ :** ಅಕ್ಟೋಬರ್/ನವೆಂಬರ್ 2016/ ಜನವರಿ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯ ವರದಿಯಲ್ಲಿ ತಿಳಿಸಿದ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:3(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Centre for Application of Radioisotope & Radiation Technology (CARRT) ಸ್ಥಾಪನೆಗೆ ಸಂಬಂಧಿಸಿದ ಕರಡು ಅನುಶಾಸನದ ಅನುಮೋದನೆ ಬಗ್ಗೆ.

**ನಿರ್ಣಯ:** ಕರಡು ಅನುಶಾಸನವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:4(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡಿರುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:5(2017)

**ವಿಷಯ :** ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ, ವಿಜಯಪುರ – ಇಲ್ಲಿನ ಕುಲಪತಿಗಳಾಗಿ ಪ್ರೊ. ಸಬಿಹಾ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಇವರ ನೇಮಕಾತಿ – ಕರ್ತವ್ಯದಿಂದ ಬಿಡುಗಡೆ ಹಾಗೂ ಕನ್ನಡ ವಿಭಾಗದಲ್ಲಿನ ಹುದ್ದೆಯ ಹಕ್ಕುಸ್ವಾಮ್ಯವನ್ನು ಕಾಯ್ದಿರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:6(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರಿಗೆ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ.

**ನಿರ್ಣಯ:** ಯುಜಿಸಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:7(2017)

**ವಿಷಯ :** ಶ್ರೀ ಹರೀಶ್ ಕುಮಾರ್, ಕೆ., ಹಿರಿಯ ಸಹಾಯಕ, ಕುಲಸಚಿವರ ಕಚೇರಿ, ಇವರು ಸ್ವಯಂ ನಿವೃತ್ತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆಯಲು ಅನುಮತಿ ನೀಡಿರುವುದನ್ನು ಘಟನೋತ್ತರವಾಗಿ ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:8(2017)

**ವಿಷಯ :** ಶ್ರೀಮತಿ ಭಾರತಿ ಪಿಲಾರ್, ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ದಿನಾಂಕ 15.05.2017 ರಿಂದ 17.05.2017 ರವರೆಗೆ Moscow, Russia, ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಯಾಗಾರದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದಿಂದ ಯಾವುದೇ ಆರ್ಥಿಕ ಹೊರೆ ಇಲ್ಲದೆ Moscow, Russia ದಲ್ಲಿ ಜರಗುವ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:9(2017)

**ವಿಷಯ :** ಡಾ. ಸಿ. ಕೆ. ಹೆಬ್ಬಾರ್, ಸಹ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ದಿನಾಂಕ 03.07.2017 ಮತ್ತು 04.07.2017 ರಂದು University of Oxford, SAID, Business School, U. K. ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರಿಗೆ ಮೇಲ್ಕಾಣಿಸಿದ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಭಾಗವಹಿಸಲು ಅನುಮತಿ ಮತ್ತು ಪ್ರಯಾಣ ದಿನಗಳು ಸೇರಿ 5 ದಿನಗಳ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:10(2017)

**ವಿಷಯ :** ಪ್ರಸಾರಾಂಗದಿಂದ ಪದವಿ ತರಗತಿಗಳಿಗೆ ಆಂಗ್ಲ ಪಠ್ಯಪುಸ್ತಕಗಳ ಪ್ರಕಟನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:11(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ – Sage Journals ನವೀಕರಣ ವೆಚ್ಚ ಮಂಜೂರಾತಿ ಬಗ್ಗೆ.

**ನಿರ್ಣಯ:** Sage Journals ನವೀಕರಣ ವೆಚ್ಚ ರೂ.1,13,393/– ಮಂಜೂರಾತಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:12(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ – Indian Citation Index (ICI) ಜರ್ನಲ್ಸ್‌ನ ನವೀಕರಣ ವೆಚ್ಚ ಮಂಜೂರಾತಿ ಬಗ್ಗೆ.

**ನಿರ್ಣಯ:** Indian Citation Index (ICI) ಜರ್ನಲ್ಸ್‌ನ ನವೀಕರಣ ವೆಚ್ಚ ರೂ.5,06,000/– ಮಂಜೂರಾತಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:13(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಅಳವಡಿಸಿದ Turnitin Anti Plagiarism Check Software - ವಾರ್ಷಿಕ ನವೀಕರಣ ಶುಲ್ಕ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ವಾರ್ಷಿಕ ನವೀಕರಣ ಶುಲ್ಕ ರೂ.4,35,160/– ಮಂಜೂರಾತಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ.3:14(2017)

**ವಿಷಯ :** ಶ್ರೀ ಪ್ರಸನ್ನ ಕುಮಾರ್ ರೈ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ನಿರ್ಣಯ:** ಪುತ್ತೂರು ತಾಲ್ಲೂಕಿನ ಸರ್ಕಾರಿ ಕಾಲೇಜುಗಳ ಶಿಕ್ಷಕರಿಗೆ ತರಬೇತಿ ನೀಡುವ ಮೊದಲು ವಿದ್ಯಾರ್ಥಿಗಳಿಗೆ ತರಬೇತಿ ನಡೆಸುವುದು ಸೂಕ್ತವೆಂದು ಸಭೆಯು ಅಭಿಪ್ರಾಯ ಪಟ್ಟಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ.3:15(2017)

**ವಿಷಯ :** ಡಾ. ಜಿ. ಈಶ್ವರ ಭಟ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ನಿರ್ಣಯ:** ಪ್ರಸ್ತಾವನೆಯ ಕ್ರ.ಸಂ.1 ಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾನಿಲಯ ಂದ ಸಂಶೋಧನಾ ಕೇಂದ್ರಗಳೆಂದು ಮಾನ್ಯತೆ ಪಡೆದ ಸಂಸ್ಥೆಗಳು ಕಡ್ಡಾಯವಾಗಿ ತಮ್ಮ ಸಂಶೋ ನಾ ಪ್ರಕಟಣೆಗಳು ಹಾಗೂ ಪೇಟೆಂಟ್‌ಗಳನ್ನು ಪಡೆಯುವಲ್ಲಿ ಮಂಗಳೂರು ವಿಶ್ವವಿದ್ಯಾನಿಲ ುದ ಹೆಸರನ್ನು ನಮೂದಿಸುವಂತೆ ಸೂಚಿಸಲು ಹಾಗೂ ಈ ಕುರಿತು ಪರಿನಿಯಮದಲ್ಲಿ ುಕ್ತ ತಿದ್ದುಪಡಿಯನ್ನು ಮಾಡಲು ಕ್ರಮಕೈಗೊಳ್ಳಲು ಕುಲಸಚಿವರಿಗೆ ಸೂಚಿಸಲಾಯಿತು.

ಪ್ರಸ್ತಾವನೆಯ ಕ್ರ.ಸಂ.2 ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವೇ ಕೆಮಿಕಲ್ ಳನ್ನು ಪೂರೈಸುವುದೆಂದು ನಿರ್ಧರಿಸಲಾಯಿತು.

ಪ್ರಸ್ತಾವನೆಯ ಕ್ರ.ಸಂ.3ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯಕ್ಕೆ ಹಣಕಾಸಿನ ನೆರವನ್ನು ನೀ ತಲು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:16(2017)

**ವಿಷಯ :** Necessary maintenance work to the Centenary Building at Univer ity College (call-2) – ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೇಲಿನ ಕಾಮಗಾರಿಯ ನಿಷ್ಟ ಟೆಂಡರು ಮೊತ್ತ ರೂ.18,97,234.50 ಕ್ಕೆ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:17(2017)

**ವಿಷಯ :** Construction of compound wall to the F.M.K.M.C. College, Madikeri, Kodagu Distr ct - ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೇಲಿನ ಕಾಮಗಾರಿಯ ಕ ಷ್ಟ ಟೆಂಡರು ಮೊತ್ತ ರೂ.11,99,183/– ಕ್ಕೆ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:18(2017)

**ವಿಷಯ :** Providing new water supply main lines to the Quarters and La ies Hostels at Mangalore University Campus, Mangalagangothri - ಟೆಂ ಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೇಲಿನ ಕಾಮಗಾರಿಯ ಕ ಷ್ಟ ಟೆಂಡರು ಮೊತ್ತ ರೂ.14,13,898.32 ಕ್ಕೆ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:19(2017)

**ವಿಷಯ :** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿಯ ಆವರಣಕ್ಕೆ 100 KVA ಪರಿವರ್ತಕ ಅಳವಡಿಸುವುದು – ಅವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:20(2017)

**ವಿಷಯ :** Development of Park at Mangalore University Quarters premises
– ಅಂದಾಜು ಮೊತ್ತ ರೂ. 119.00 ಲಕ್ಷ

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ಸಾ.ಸ.3:21(2017)

**ವಿಷಯ :** Construction of Clock Tower with water fountain in between Science Block and Library Building located at Mangalore University Campus.
– ಅಂದಾಜು ಮೊತ್ತ ರೂ. 65,00,000.00

**ನಿರ್ಣಯ:** ದಿನಾಂಕ 02.05.2017ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:22(2017)

**ವಿಷಯ :** 'ಇ' ಆಡಳಿತ ವ್ಯವಸ್ಥೆಗೆ ಸಂಬಂಧಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧ ಕಟ್ಟಡದ ನೆಲ ಮಹಡಿ ಹಾಗೂ 2ನೇ ಮಹಡಿಯಲ್ಲಿರುವ ಕೊಠಡಿಗಳ ನವೀಕರಣದ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೇಲಿನ ಕಾಮಗಾರಿಯ ಕನಿಷ್ಟ ಟೆಂಡರು ಮೊತ್ತ ರೂ.3,14,87,500/- ಕ್ಕೆ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:23(2017)

**ವಿಷಯ :** ವಿಶ್ವವಿದ್ಯಾನಿಲಯದ ವೆಬ್ ಪೋರ್ಟಲ್‌ಗೆ ಅಗತ್ಯವಿರುವ ಸರ್ವರ್‌ಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಕನಿಷ್ಟ ಟೆಂಡರು ಮೊತ್ತ ರೂ.14,12,562/- ಕ್ಕೆ ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:24(2017)

**ವಿಷಯ :** ಪ್ರೊ. ವಿಶಾಲಾಕ್ಷಿ ಬಿ., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರಿಗೆ ದಿನಾಂಕ 07.06.2017 ರಿಂದ 09.06.2017ರ ವರೆಗೆ Bali Indonesia ಇಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಪತ್ರಿಕೆ ಮಂಡಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರಿಗೆ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಹಾಗೂ ರಜಾ ಸೌಲಭ್ಯ ನೀಡಲು ನಿರ್ಣಯಿಸಲಾಯಿತು. ಪ್ರಸ್ತುತ ವಿಶ್ವವಿದ್ಯಾನಿಲಯಕ್ಕೆ ಯುಜಿಸಿ ನಿಗದಿಪಡಿಸದ ಅನುದಾನಗಳ ಶೀರ್ಷಿಕೆಯಡಿ ಅನುದಾನದ ಕೊರತೆಯಿರುವುದರಿಂದ ಆರ್ಥಿಕ ಸೌಲಭ್ಯ ಮಂಜೂರು ಮಾಡಲು ಸಾಧ್ಯವಿಲ್ಲವೆಂದು ತಿಳಿಸಲು ನಿರ್ಧರಿಸಲಾಯಿತು.

ವಿಶ್ವವಿದ್ಯಾನಿಲಯದ ಶಿಕ್ಷಕರನ್ನು ಸಭೆ. ಸಮ್ಮೇಳನ. ಕಾರ್ಯಾಗಾರ. ಪ್ರಾಜೆಕ್ಟ್ ಸಂಬಂಧಿಕಾರ್ಯಗಳು ಇತ್ಯಾದಿಗಳಲ್ಲಿ ಭಾಗವಹಿಸಲು ಹೊರದೇಶಗಳಿಗೆ ಪ್ರತಿನಿಯೋಜಿಸುವ ಅನುಶಾಸನ/ಮಾರ್ಗಸೂಚಿಯನ್ನು ಯುಜಿಸಿಯ ನಿಯಮಾವಳಿಗಳ ಪ್ರಕಾರ ಪುನರ್ ಪರಿಶೀಲಿಸಲು ನಿರ್ಧರಿಸಲಾಯಿತು. ಇನ್ನು ಮುಂದೆ ವಿದೇಶಕ್ಕೆ, ಸಭೆ, ಸಮ್ಮೇಳನ, ಕಾರ್ಯಾಗಾರ ಇವುಗಳಲ್ಲಿ ಭಾಗವಹಿಸಲಿಚ್ಚಿಸುವ ಪ್ರಾಧ್ಯಾಪಕರುಗಳಿಗೆ ಯುಜಿಸಿ ನಿಗದಿಪಡಿಸದ ಅನುದಾನದಿಂದ, ಯುಜಿಸಿಯಿಂದ ಬರಬೇಕಾದ ಹಣ ಬರದೇ ಇರುವುದರಿಂದ ಹಾಗೂ ಮುಂದೆ ನೀಡುವ ಅನುದಾನದ ಕುರಿತು ಯುಜಿಸಿಯಿಂದ ಮಾಹಿತಿಯಿರದೇ ಇರುವ ಹಿನ್ನೆಲೆಯಲ್ಲಿ ಯಾವುದೇ ಹಣಕಾಸು ನೆರವು ನೀಡದಿರಲು ನಿರ್ಧರಿಸಲಾಯಿತು ಹಾಗೂ ಈ ಬಗ್ಗೆ ಎಲ್ಲಾ ವಿಭಾಗಗಳಿಗೆ ಸುತ್ತೋಲೆಯನ್ನು ಕಳುಹಿಸಿಕೊಡಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:25(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ – I Scholar database ಜರ್ನಲ್ಸ್‌ನ ಚಂದಾದಾರಿಕೆ ಶುಲ್ಕ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಜರ್ನಲ್ಸ್‌ನ ಚಂದಾದಾರಿಕೆ ಶುಲ್ಕ ರೂ.3,31,775/– ನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:26(2017)

**ವಿಷಯ :** DAE – BRNS ಪ್ರಾಜೆಕ್ಟ್, ರಸಾಯನಶಾಸ್ತ್ರ ವಿಭಾಗ – ಉಪಕರಣ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 02.05.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ರೂ.2,69,000/–ಕ್ಕೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:27(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಮತ್ತು ಸಂಶೋಧನಾ ಕೇಂದ್ರ" ಸ್ಥಾಪಿಸುವ ಬಗ್ಗೆ ರಚಿಸಿದ ಕರಡು ಪರಿನಿಯಮದಲ್ಲಿ ತಿದ್ದುಪಡಿಗಳನ್ನು ಅಳವಡಿಸುವ ಕುರಿತು.

**ನಿರ್ಣಯ:** ನಮೂದಿಸಿದ ತಿದ್ದುಪಡಿಗಳನ್ನು ಅಳವಡಿಸಿಕೊಂಡು "ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಮತ್ತು ಸಂಶೋಧನಾ ಕೇಂದ್ರ" ಸ್ಥಾಪಿಸುವ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.3:28(2017)

**ವಿಷಯ :** ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಎಂಬ ವಿದ್ಯಾಸಂಸ್ಥೆಗೆ 'ಪಿಹೆಚ್.ಡಿ. ಇನ್ ಮೇನೇಜ್‌ಮೆಂಟ್' ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ವಿಷಯ ಪರಿಣಿತರ ಸಮಿತಿಯು ಸಲ್ಲಿಸಿದ ವರದಿಯ ಆಧಾರದ ಮೇರೆಗೆ ಸದರಿ ವಿದ್ಯಾಸಂಸ್ಥೆಗೆ Ph.D. in Management ಕೋರ್ಸಿಗೆ ಸಂಯೋಜನೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.3:29(2017)

**ವಿಷಯ :** Proposal to mention the address of the department concerned in publications by the external guides from Mangalore University recognised research centres.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.3:30(2017)

**ವಿಷಯ :** ಶ್ರೀಮತಿ ಸಿ. ರಾಜೇಶ್ವರಿ, ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ವೈಯಕ್ತಿಕ ನೆಲೆಯಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾ.ಸ.3:31(2017)

**ವಿಷಯ :** ಶ್ರೀ ಸುನಿಲ್ ಕುಮಾರ್ ಡಿ. ಎಸ್., ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಗಣಕ ವಿಜ್ಞಾನ ವಿಭಾಗ ಇವರಿಗೆ ಅಂತರಾಷ್ಟ್ರೀಯ ಕಾರ್ಯಾಗಾರದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರಿಗೆ ದಿನಾಂಕ 15.05.2017 ರಿಂದ 18.05.2017ರ ವರೆಗೆ Lomonosov Moscow State University, Moscow, Russia ಇಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕಾರ್ಯಗಾರದಲ್ಲಿ ಭಾಗವಹಿಸಿ ಪ್ರಬಂಧ ಮಂಡನೆಗೆ ಆರ್ಥಿಕ ಸಹಾಯ (ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ನೋಂದಣಿ ಶುಲ್ಕ ಹಾಗೂ ಇತರ ವೆಚ್ಚಗಳು ಸೇರಿ) ರೂ.1,51,640/– ಅದರಲ್ಲಿ ಮುಂಗಡ ರೂ.1,43,640/– ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.3:32(2017)

**ವಿಷಯ :** ಪರೀಕ್ಷಾ ಅವ್ಯವಹಾರಗಳ ಕುರಿತು.

**ನಿರ್ಣಯ:** ಸಮಯದ ಅಭಾವದಿಂದಾಗಿ ಮುಂದಿನ ಸಭೆಯಲ್ಲಿ ಚರ್ಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.3:33(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "ರಾಣಿ ಅಬ್ಬಕ್ಕ ಅಧ್ಯಯನ ಪೀಠ" ಸ್ಥಾಪನೆ ಬಗ್ಗೆ ರಚಿಸಿದ ತಿದ್ದುಪಡಿ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.3:34 (2017)

**ವಿಷಯ :** ಶೈಕ್ಷಣಿಕ ವರ್ಷ 2017–18ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿ ಶುಲ್ಕ ನಿಗದಿ ಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು, ಎಲ್ಲಾ ವಿಜ್ಞಾನ ವಿಭಾಗಗಳ ಪ್ರಯೋಗಾಲಯ ಶುಲ್ಕದಲ್ಲಿ ರೂ.500/– ರಷ್ಟು ಹೆಚ್ಚಳವನ್ನು ಮಾಡಲು ಹಾಗೂ M.Sc. Organic Chemistry & M.Sc. Chemistry ಇವುಗಳ ಪರೀಕ್ಷಾ ಶುಲ್ಕಗಳನ್ನು ಸಮಾನಗೊಳಿಸಲು ನಿರ್ಧರಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರುಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |